**ಕರ್ನಾಟಕ ವಿಧಾನ ಪರಿಷತ್ತು**

| | | | |
|---|---|---|---|
| 1. | **ಚುಕ್ಕೆ ಗುರುತಿಲ್ಲದ ಪ್ರಶ್ನೆ** | : | **1777** |
| 2. | **ವಿಧಾನ ಪರಿಷತ್ತು ಸದಸ್ಯರ ಹೆಸರು** | : | **ಶ್ರೀ.ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)** |
| 3. | **ಉತ್ತರಿಸುವ ಸಚಿವರು** | : | **ತೋಟಗಾರಿಕೆಮತ್ತುರೇಷ್ಮೆಸಚಿವರು** |
| 4. | **ಉತ್ತರಿಸಬೇಕಾದ ದಿನಾಂಕ** | : | **19-03-2021** |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಬಹುತೇಕ ರೈತರು ಬೆಳೆಯುವ ಆಲೂಗಡ್ಡೆ, ಟೊಮ್ಯಾಟೊ, ಈರುಳ್ಳಿ, ಬದನೆಕಾಯಿ ಮುಂತಾದ ಕಾಯಿಪಲ್ಯಗಳ ಬೆಳೆಗಳಿಂದ ಲಾಭದಾಯಕವಾಗಿಲ್ಲದ ವ್ಯವಸಾಯ ಆಗಿರುವ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯಾವುದಾದರೂ ಸಮೀಕ್ಷೆ ನಡೆಸಿವೆಯೇ; (ವಿವರ ನೀಡುವುದು) | ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಲಾಭದಾಯಕವಾಗಿಲ್ಲದ ವ್ಯವಸಾಯ ಆಗಿರುವ ಕುರಿತು ಸಮೀಕ್ಷೆ ಕೈಗೊಂಡಿರುವುದಿಲ್ಲ. |
| ಆ) | ಈ ಬೆಳೆಗಳಿಗೆ ದೊರೆಯುವ ಅತಿ ಕಡಿಮೆ ಬೆಲೆಯ ಸಮಸ್ಯೆ ಬಗ್ಗೆ ಸರ್ಕಾರ ಅದನ್ನು ಸರಿಪಡಿಸಲು ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ಬೆಳೆಗಳಿಗೆ ದೊರೆಯುವ ಅತಿ ಕಡಿಮೆ ಬೆಲೆಯ ಸಮಸ್ಯೆ ಉಂಟಾದಾಗ ಅದನ್ನು ಸರಿಪಡಿಸಲು ಕೆಳಗಿನ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>1. ವಿಸ್ತೀರ್ಣ, ಉತ್ಪಾದನೆ, ಬೇಡಿಕೆ ಹಾಗೂ ಪೂರೈಕೆಗಳನ್ನು ಅವಲೋಕಿಸಿ, ಮಾರುಕಟ್ಟೆ ಪರಿಸ್ಥಿತಿಯನ್ನು ಪರಿಗಣಿಸಿ **ಮಾರುಕಟ್ಟೆ ಮಧ್ಯೆ ಪ್ರವೇಶ(MIS)** ಯೋಜನೆಯನ್ನು ಜಾರಿಗೊಳಿಸಲು ಕ್ರಮವಹಿಸಲಾಗುತ್ತಿದೆ. ಈ ಯೋಜನೆಯಡಿ **ಮಾರುಕಟ್ಟೆ ಮಧ್ಯೆ ಪ್ರವೇಶ(MIS) ವನ್ನು** ನೀಡಲಾಗುತ್ತಿದೆ.<br>2. ಬೆಲೆ ಕೊರತೆ ಪಾವತಿ ಯೋಜನೆಯನ್ನು ಜಾರಿಗೊಳಿಸಿ ಮಾರುಕಟ್ಟೆ ಬೆಲೆ ಮತ್ತು ಸರ್ಕಾರವು ನಿಗದಿಪಡಿಸಿರುವ ಬೆಲೆಗಳ ವ್ಯತ್ಯಾಸದ ಮೊತ್ತವನ್ನು ಪಾವತಿಸಲಾಗುತ್ತಿದೆ. |
| ಇ) | ಕೇಂದ್ರ ರಾಜ್ಯ ಸರ್ಕಾರಗಳಿಂದ ಸ್ಥಾಪಿತವಾಗಿರುವ ಬೆಲೆ ಅನುವರ್ತನಿಧಿ (Price Stabilzation Fund) ಯಿಂದ ಎಷ್ಟರ ಮಟ್ಟಿಗೆ ಯಾತನೆ ಮಾರಾಟ (Distress sale) ದಿಂದ ಪಾರು ಮಾಡಲು ಸಾಧ್ಯವಾಗಿದೆ; (ವಿವರ ಒದಗಿಸುವುದು) | ಕೇಂದ್ರ ಸರ್ಕಾರದ ಬೆಲೆ ಸ್ಥಿರೀಕರಣ ನಿಧಿ(Price Stabilation Fund) ಯೋಜನೆಯಡಿಯಲ್ಲಿ ಖರೀದಿಸಲಾಗಿರುವ ಉತ್ಪನ್ನಗಳ ವಿವರ ಕೆಳಗಿನಂತಿದೆ: |

| ವರ್ಷ | ಉತ್ಪನ್ನ | ಖರೀದಿಸಿದ ಪ್ರಮಾಣ (ಕ್ವಿಂಟಾಲ್ ಗಳಲ್ಲಿ) | ರೈತ ಫಲಾನುಭವಿಗಳ ಸಂಖ್ಯೆ |
|---|---|---|---|
| 2016-17 | ತೊಗರಿ | 31,32,372 | 127730 |
| 2019-20 | ತೊಗರಿ | 782114 | 94477 |

| | | |
|---|---|---|
| ಈ) | ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬೆಳೆಗಳನ್ನು ಬೆಳೆದು ಪದೆ ಪದೆ ತೊಂದರೆ ಗೊಳಗಾಗುವ ರೈತರಿಗೆ ಮಾರ್ಗೋಪಾಯಗಳನ್ನು ನೀಡಲು ಮತ್ತು ಯಾತನೆ ಮಾರಾಟದಿಂದ ಮುಕ್ತಿಗೊಳಿಸಲು ಶಾಶ್ವತ ಕೃಷಿ ಆಯೋಗವನ್ನು ಸ್ಥಾಪಿಸುವ ಉದ್ದೇಶವಿದೆಯೇ? (ಸಂಪೂರ್ಣ ಮಾಹಿತಿ ನೀಡುವುದು) | ಈಗಾಗಲೇ ಕೇಂದ್ರ ಸರ್ಕಾರವು ಕೃಷಿ ಬೆಲೆ ಮತ್ತು ವೆಚ್ಚ ಆಯೋಗವನ್ನು ಮತ್ತು ರಾಜ್ಯ ಸರ್ಕಾರವು ಕರ್ನಾಟಕ ಕೃಷಿ ಬೆಲೆ ಆಯೋಗವನ್ನು ಸ್ಥಾಪಿಸಿರುತ್ತದೆ.<br><br>ಪ್ರಸ್ತುತ ಶಾಶ್ವತ ಕೃಷಿ ಆಯೋಗವನ್ನು ಸ್ಥಾಪಿಸುವ ಉದ್ದೇಶ ಇರುವುದಿಲ್ಲ. |

Horti 181 HGM 2021

(ಮುನಿರತ್ನ)
ತೋಟಗಾರಿಕೆ ಮತ್ತು ಯೋಜನೆ,
ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಸಚಿವರು